MYSORE LEGISLATIVE ASSEMBLY.

NINTH DAY.

Wednesday, 2nd March 1955.

The House met in the Legislative Assembly Hall, Old Public Offices, Bangalore, at Twelve of the Clock.

MR. SPEAKER (SRI H. S. RUDRAPPA, B.SC., LL.B.) in the Chair.

QUESTIONS AND ANSWERS.

Depressed Classes (reservation in appointments of Revenue Inspectors).

Q.—90. Sri H. K. SIDDAIYA (Belur—Scheduled Castes).—

Will the Government be pleased to state :—

(*a*) the number of Revenue Inpectors in charge of hoblies in the State ;

(*b*) the number of Revenue Inspectors belonging to Depressed Classes in charge of hoblies ;

(*c*) whether 16 2/3 rds per cent reservation to the Depressed Classes has been maintained in appointing Revenue Inspectors to the charge of hoblies ?

A.—Sri Kadidal MANJAPPA (Minister for Revenue and Public Works).—

(*a*) 410.

(*b*) 23.

(*c*) Yes. Whenever they are recruited.

ಶ್ರೀ ಎಚ್. ಕೆ. ಸಿದ್ದಯ್ಯ.—ತಾವು (ಬ) ಪ್ರಶ್ನೆಗೆ ಉತ್ತರವಾಗಿ 23 ಜನ ಎಂದು ತಿಳಿಸಿದ್ದೀರಿ. ಇದರಲ್ಲಿ ಸ್ಪೆಷಲ್ ರೆವಿನ್ಯೂ ಇನ್‌ಸ್ಪೆಕ್ಟರುಗಳೂ ಸಹ ಸೇರಿದ್ದಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ಎಚ್. ಕೆ. ಸಿದ್ದಯ್ಯ.—ಆದರೆ ತಾವೀಗ ಇಲ್ಲಿ ಹೇಳಿರತಕ್ಕ ಒಟ್ಟು ಸಂಖ್ಯೆ 410 ರಲ್ಲಿ ಈ 23 ಜನ ನಿಮ್ಮ ತರಗತಿಯ ಆರ್. ಐ. ಗಳನ್ನು ಕಳೆದರೆ ಉಳಿದವರ ಸಂಖ್ಯೆ 387 ಆಗುತ್ತದೆ. ಆದರೆ ತಾವು ಈ ನಿಮ್ಮ ಪಂಗಡದವರಿಗೆ ಸರ್ಕಾರಿ ನೌಕರಿಗಳನ್ನು ಕೊಡತಕ್ಕ ದ್ದರ ಬಗ್ಗೆ ಮಾಡಿರುವ 16 2/3 ಶೇಕಡಕ್ಕೆ ಇದು ಬಹಳ ಕಡಮೆಯಾಗಿರುವುದರಿಂದ ಈ 16 2/3 ಭಾಗಕ್ಕೆ ಸರಿಹೋಗುವತನಕ ಖಾಲಿ ಬೀಳುವ ಸ್ಥಾನ ದಲ್ಲಿ ನಿಮ್ಮ ಪಂಗಡದವರನ್ನೇ ನೇಮಿಸಿಕೊಳ್ಳತಕ್ಕ ಬಗ್ಗೆ ತಾವೇನು ಏರ್ಪಾಡು ಮಾಡಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ನಾವು ಈಗ ಹೊಸ ದಾಗಿ ಏನೊಂದು ನಿಬಂಧನೆಯನ್ನು ಈಬಗ್ಗೆ ಮಾಡಿದ್ದೇವೋ ಅದನ್ನು ಕಡ್ಡಾಯವಾಗಿ ಪರಿಪಾಲಿಸುತ್ತಿದ್ದೇವೆ. ಇನ್ನು ಮುಂದೆ ಖಾಲಿ ಬೀಳತಕ್ಕ ಎಲ್ಲಾ ಸರ್ಕಾರಿ ನೌಕರಿಗಳಲ್ಲೂ ನಿಮ್ಮ ಪಂಗಡದವರಿಗೆ 16 2/3 ಶೇಕಡ ಭಾಗವನ್ನು ವಿನಿಯೋಗಿಸಬೇಕೆಂದು ಆರ್ಡರ್ ಮಾಡಿದ್ದೇವೆ.

ಶ್ರೀ ಎಚ್. ಕೆ. ಸಿದ್ದಯ್ಯ.—ಹಾಗಾದರೆ ಈಗ ತಾವು ಮಾಡಿರತಕ್ಕ ಆಜ್ಞೆಗಳು ಹೊಸದಾಗಿ ತೆಗೆದು ಕೊಳ್ಳತಕ್ಕವರಿಗೆ ಮಾತ್ರ ಅನ್ವಯಿಸುತ್ತದೆಯೋ ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಎಚ್. ಕೆ. ಸಿದ್ದಯ್ಯ.—ಈಗ ತಾವು ಈ ಸ್ಪೆಷಲ್ ರೆವಿನ್ಯೂ ಇನ್‌ಸ್ಪೆಕ್ಟರವರಿಗೆ 50 ರೂಪಾಯಿಗಳ ಸಂಬಳವನ್ನು ಮಾತ್ರ ಕೊಟ್ಟು ಇನ್ನು ಳಿದ ರೆವಿನ್ಯೂ ಇನ್‌ಸ್ಪೆಕ್ಟರುಗಳಿಗೆ ಪಾಸ್ತಿ ಸಂಬಳ ಕೊಡುತ್ತಿದ್ದೀರಿ. ಈ ವ್ಯತ್ಯಾಸಕ್ಕೆ ಕಾರಣವೇನು ?

ಅಧ್ಯಕ್ಷರು.—ಇದು ಸಂಬಳಕ್ಕೆ ಸಂಬಂಧಪಟ್ಟ ಪ್ರಶ್ನೆಯಲ್ಲ. ರೆವಿನ್ಯೂ ಇನ್‌ಸ್ಪೆಕ್ಟರುಗಳಿಗೆ ಸಂಬಂಧ ಪಟ್ಟ ಪ್ರಶ್ನೆಗಳನ್ನು ಮಾತ್ರ ತಾವು ಕೇಳಬೇಕು.

ಶ್ರೀ ಎಚ್. ಕೆ. ಸಿದ್ದಯ್ಯ.—ಇನ್ನು ಎಷ್ಟು ದಿವಸ ಗಳಲ್ಲಿ ಇದನ್ನು ಸರಿದೂಗಿಸಲು ಪ್ರಯತ್ನ ಮಾಡುತ್ತೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗೆ ಸರಿದೂಗಿಸ ಬೇಕೆಂಬ ಉದ್ದೇಶದಿಂದಲೇ ಅಪರೆಪ್ರೆಸೆಂಟೆಡ್ ಮತ್ತು ಅಂಡರ್ ರೆಪ್ರೆಸೆಂಟೆಡ್ ಕೋಮಿನವರಿಗೆ ಹೆಚ್ಚು ಪ್ರಾತಿನಿಧ್ಯಕೊಡಬೇಕೆಂಬ ಒಂದು ತತ್ವವನ್ನು ನಿರ್ಧಾರ ಮಾಡಲಾಗಿದೆ. ಈಗ ಆ ತತ್ವದ ಪ್ರಕಾರ ಸ್ಥಾನಗ ಳನ್ನು ಭರ್ತಿಮಾಡುತ್ತಾ ಹೋಗಲಾಗುತ್ತಿದೆ.

ಶ್ರೀ ಎಚ್. ಕೆ. ಸಿದ್ದಯ್ಯ.—ಇಲ್ಲಿ ತಾವು ತೋರಿಸಿ ರುವ ಅಂಕಿ ಅಂಶಗಳ ಆಧಾರವನ್ನು ತೆಗೆದು ಕೊಂಡರೆ, ಈ ನಿಮ್ಮ ಪಂಗಡದವರಿಗೆ ಬಾಯಲ್ಲಿ ಹೇಳದಂತೆ ಕಾರ್ಯದಲ್ಲಿ ತೋರಿಸದೆ ಅವರಿಗೆ ಅನು ಕೂಲಗಳು ಖೋತಾ ಆಗುತ್ತಿವೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗೆ ಖೋತಾ ಏನೂ ಮಾಡಿಲ್ಲ. ಆ ನೌಕರಿಗಳೆಲ್ಲಾ ಈಗ ಹೊಸದಾಗಿ ಭರ್ತಿಮಾಡಿದಂಥವುಗಳಲ್ಲ. ಅವುಗಳೆಲ್ಲಾ ಬಹಳ ಹಿಂದೆಯೇ ಭರ್ತಿ ಆಗಿರುತ್ತವೆ. ಅವುಗಳ ಆಧಾರದ ಮೇಲೆ ಈ ರೀತಿ ಲೆಕ್ಕಹಾಕಕೊಂಡು ಖೋತಾ ಆಗಿದೆ ಯೆಂಬುದು ಸರಿಯಲ್ಲ. ಈ ಹಿಂದೆ ಕೆಲವುವೇಳೆ ಪ್ರೊಬೇಷನರುಗಳನ್ನು ಬೇರೆ ತೆಗೆದುಕೊಳ್ಳಲಾಯಿತು. ಆದರೆ ತಾವು ಕೇಳತಕ್ಕ ರೀತಿಯಲ್ಲಿ ಎಲ್ಲವನ್ನೂ ಒಂದೇ ಸಲಕ್ಕೆ ತರೆಕೆಳಗು ಮಾಡುವುದಕ್ಕಾಗುವುದಿಲ್ಲ. ಅದು ಬಹಳ ಕಷ್ಟವಾಗುತ್ತದೆ.

ಶ್ರೀ ಎಚ್. ಕೆ. ಸಿದ್ದಯ್ಯ.—ಇನ್ನು ಮುಂದಕ್ಕಾ ದರೂ ಇವರಿಗೊಂದು ಸರಿಯಾದ ರೀತಿಯಲ್ಲಿ ಈ ನೌಕರಿಗಳು ಹಂಚಿಕೆಯಾಗುವಂತೆ ಸರ್ಕಾರದವರು ಒಂದು ಆಜ್ಞೆಯನ್ನಾದರೂ ಮುಂದಕ್ಕೆ ಮಾಡುವರೇ ?

ಶ್ರೀ ಕಡಿದಾಳ್ ಮಂಜಪ್ಪ.—ಖಂಡಿತವಾಗಿ ಮಾಡುತ್ತೇವೆ. ಈಗಾಗಲೇ ಮಾಡಿಯೇ ಇದ್ದೇವೆ.

ಶ್ರೀ ಎಚ್. ಕೆ. ನಿದ್ದಯ್ಯ.—ತಮ್ಮ ಇಲಾಖಾ ಅಧಿಕಾರಿಗಳು ಈ ವಿಚಾರದಲ್ಲಿ ಸರಿಯಾಗಿ ಸರ್ಕಾರದ ಆಜ್ಞೆಗನುಸಾರವಾಗಿ ನಡೆದುಕೊಳ್ಳುತ್ತಿದ್ದಾರೆಯೇ ಅಥವಾ ಇಲ್ಲವೇ ಎಂಬುದನ್ನು ತಾವು ವಿಚಾರ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಆಗಲು ಮಾಡುತ್ತೇವೆ. ಅವರಿಗೆಲ್ಲಾ ಖಚಿತವಾದ ತಿಳಿವಳಿಕೆಗಳನ್ನು ಈಗಾಗಲೇ ಕೊಡಲಾಗಿದೆ.

ಶ್ರೀ ಬಿ. ರಾಚಯ್ಯ.—ಕಳೆದ ಅಧಿವೇಶನದಲ್ಲಿ ಈ ಸಭೆಯಲ್ಲೇ ಈ ಪ್ರಶ್ನೆಯಲ್ಲಿ ಅಡಕವಾಗಿರತಕ್ಕಂಥ ವಿಚಾರದ ಬಗ್ಗೆ ಒಂದು ನಿರ್ಣಯ ಚರ್ಚೆಗೆ ಬಂದು ಅದು ತೀರ್ಮಾನವಾಗಿರತಕ್ಕ ಅಂಶ ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಆ ವಿಚಾರ ನನಗೂ ಗೊತ್ತಿದೆ. ಅದರ ಬಗ್ಗೆ ನೂಕ್ತ ಸಲಹೆಕೊಡಲು P.S.C. ಗೆ ಕಳುಹಿಸಲಾಗಿದೆಯೆಂದು ಈ ಹಿಂದೆಯೇ ಈ ಮಾನ್ಯ ಸಭೆಗೆ ಅರಿಕೆ ಮಾಡಿಕೊಂಡಿದ್ದೆನು. ಆದರೆ ಈ ಸಂಬಂಧವಾಗಿ ಆ P.S.C. ಅವರ ಒಪಿನಿಯರ್ ಇನ್ನೂ ಬಂದಿಲ್ಲ. ಆದಾಗ್ಯೂ ಆ ನಿರ್ಣಯದಲ್ಲಿ ಏನು ತತ್ವ ಅಡಕವಾಗಿತ್ತೋ ಅದರಂತೆಯೇ ಕೆಲಸವನ್ನು ನಡೆಸಬೇಕೆಂದು ಆ P.S.C. ಅವರಿಗೂ ಮತ್ತು ಇಲಾಖಾ ಮೊಖ್ತೇಸರರಿಗೂ ತಿಳಿವಳಿಕೆ ಕೊಡಲಾಗಿದೆ.

ಶ್ರೀ ಬಿ. ರಾಚಯ್ಯ.—ಆದರೆ ಅವರು ತಮ್ಮ ಆಜ್ಞೆಗಳಿಗೆ ಬದ್ಧರಾಗಿ ನಡೆಯುತ್ತಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಬಂದಿಲ್ಲ.

ಶ್ರೀ ಬಿ. ರಾಚಯ್ಯ.—ಹಾಗಾದರೆ ಇಲ್ಲಿಯವರೆಗೂ ತಮ್ಮ ಆಜ್ಞೆಗನುಸಾರವಾಗಿಯೇ ನಡೆದಿದ್ದಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ನಾವು ಈ ಹೊಸ ಆಜ್ಞೆಯನ್ನು ಅವರಿಗೆ ಇತ್ತೀಚೆಗೆ ಕಳುಹಿಸಿದ್ದೇವೆ. ಆದರೆ ಅವರು ಇಷ್ಟುಬೇಗ ಇದರ ಬಗ್ಗೆ ಅನಕ್ಕೆ ಕೋರಿಸಿದ್ದಾರೆಯೇ ಅಥವಾ ಇಲ್ಲವೇ ಎಂಬುದನ್ನು ಹೇಳುವುದಕ್ಕಾಗುವುದಿಲ್ಲ.

ಶ್ರೀ ಟಿ. ಹನುಮಯ್ಯ.—ಈ ಸ್ಪೆಷಲ್ ರೆವಿನ್ಯೂ ಇನ್‌ಸ್ಪೆಕ್ಟರುಗಳಿಗೇ ಒಂದು ಸಂಬಳ, ಇತರ ರೆವಿನ್ಯೂ ಇನ್‌ಸ್ಪೆಕ್ಟರುಗಳಿಗೇ ಒಂದು ರೀತಿ ಸಂಬಳ ಹೀಗೆ ಒಂದು ವ್ಯತ್ಯಾಸವನ್ನು ಈ ಸಂಬಳಗಳಲ್ಲಿ ಏತಕ್ಕೆ ಮಾಡಿದ್ದೀರಿ?

ಶ್ರೀ ಕಡಿದಾಳ್ ಮಂಜಪ್ಪ.—ಈ ಸಂಬಳದ ವಿಚಾರವನ್ನು ಹಿಂದೆಯೇ ನಿಗದಿ ಮಾಡಿದ್ದರು. ಈಗ ಹೊಸದಾಗೇನೂ ಈ ಸ್ಪೆಷಲ್ ರೆವಿನ್ಯೂ ಇನ್‌ಸ್ಪೆಕ್ಟರುಗಳಿಗೆ ಸಂಬಳವನ್ನು ಕಡಮೆಯಾಗಿ ಕೊಡಬೇಕೆಂದು ನಾವೇನೂ ಮಾಡಿಲ್ಲ. ಅದು ಹಿಂದೆ ಯಾವ ರೀತಿಯಿತ್ತೋ ಈಗಲೂ ಅದೇ ರೀತಿಯಾಗಿ ನಡೆದುಕೊಂಡು ಬರುತ್ತಿದೆ.

ಶ್ರೀ ಟಿ. ಹನುಮಯ್ಯ.—ಹೀಗೆ ಅವರಿಗೆ ಕಡಮೆ ಸಂಬಳ ಕೊಡುವುದು ತಮಗೆ ತೃಪ್ತಿಕರವಾಗಿದೆಯೇ ?

(ಉತ್ತರವಿಲ್ಲ.)

"Mirase" to Village Officers.

Q.—205. **Sri T. HANUMAIYA** (Hiriyur—Scheduled Castes).—

Will the Government be pleased to state :—

(*a*) the number of Patels, Shanbhogs, Thoties and Talaries in the State (districtwar and talukwar) ;

(*b*) whether there is any system of "Mirase" in the State ; if so, a statement of demand, collection and balance for the State (districtwar and talukwar) may kindly be furnished ?

A.—**Sri Kadidal MANJAPPA** (Minister for Revenue and Public Works).—

(*a*) Please see the Statement appended below.

(*b*) Yes. D. C. B. particulars are not readily available.

Statement showing the number of Patels, Shanbhogs, Thoties and Talaries in the State

Names of Taluks			*Patels*	*Shanbhogs*	*Thoties*	*Talaries*
Bangalore District.—						
1. Bangalore North	...	...	126	54	113	56
2. Bangalore South	...	...	168	98	...	...
3. Doddaballapur	...	...	248	139	177	374
4. Devanahalli	...	...	189	114	116	92
5. Hosakote	...	...	170	129	365	363
6. Anekal	...	...	182	145	179	179
7. Nelamangala	...	...	189	104	200	249
8. Ramanagaram	...	...	113	61	176	29
9. Channapatna	...	...	115	64	210	156
10. Kanakapura	...	...	234	85	230	168
11. Magadi	...	...	254	122	210	156
	Total	...	1,988	1,115	...	...